# ಗೋಕುಲದೊಳಗಿರಲಾರೆವಮ್ಮ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 72
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 222
3. **Note:** Lyrics given without highlights are as per Ref. 2. The wordings given in yellow highlights are as per Ref. 1.
4. **Note:** Singer has followed lyrics as in Ref. 2.

ರಾಗ: ಆನಂದ ಭೈರವಿ ತಾಳ: ಅಟ

ಗೋಕುಲದೊಳಗಿರಲಾರೆವಮ್ಮ, ಗೋಪ್ಯಮ್ಮ ಕೇಳೆ
ಸಾಕು ಸಾಕು ನಮಗೇಕೀ ವ್ರಜವು, ಆ ಕೃಷ್ಣನ ಕಾಟದಿ ॥ ಪ ॥

ಪಾಲು ಮೊಸರು ಕದ್ದರೆ ಕದಿಲಿ, ಗೋಪ್ಯಮ್ಮ ಕೇಳೆ
ಮೇಲಿಟ್ಟ ಬೆಣ್ಣೆ ಮೆದ್ದರೆ ಮೆಲಲಿ, ಗೋಪ್ಯಮ್ಮ ಕೇಳೆ
ಈರೇಳು ಭುವನದೊಳೋಲಾಡುತ್ತಿರಲಿ
ಆಲಯವನು ಪೊಕ್ಕು ಭಾಳ ಸಂಭ್ರಮದಿ
ಬಾಲೆಯರೆಲ್ಲರ ಬತ್ತಲೆ ಮಾಡಿಸಿ
ಶ್ಯಾಲೆಗಳೆಲ್ಲವ ಮೇಲಕೆ ಹಾರಿಸಿ
ಆಲಿಂಗಿಸಿಕೊಂಡು ಬರುತಾನಮ್ಮ ॥ 1 ॥

ಮನೆಗೆ ತಾನಾಗಿ ಬಂದರೆ ಬರಲಿ ಬಾಹೋ ವೇಳೆಯಲಿ
ಗೆಣೆಯರ ಕೂಡಿಕೊಂಡು ಇರಲಿ ಕರೆತಂದರೆ ತರಲಿ
ಅನುಬಂಧನಾಗಿ ಇದ್ದರೆ ಇರಲಿ
ಅನುವು ನೋಡಿಕೊಂಡಾ ವೇಳೆಯಲಿ
ಉಣಬಿಟ್ಟುಣಿಸಿ ಆಕಳ ಕರುಗಳ
ಮನೆಯವರೆಲ್ಲರ ತಾನೇ ಎಬ್ಬಿಸಿ
ಮನೆಯೆಲ್ಲ ಸೂರಾಡಿದನಮ್ಮ ॥ 2 ॥

ಬಾರಿ ಬಾರಿಗೆ ಒಲಿದ ಕಳ್ಳ ಯಶೋದೆ ಕೇಳೆ
ಊರ ಹೆಂಗಳರ ಕೂಡಿದ ಗೊಲ್ಲ ಗೋಪ್ಯಮ್ಮ ಕೇಳೆ
ಯಾರ ಮುಂದ್ಹೇಳುವುದು ಈ ಸೊಲ್ಲ
ವಾರಿಗೆಯ ಸಂಸಾರ ಮಾಡುವನು
ನಾರಿಯರೆಲ್ಲರ ನಂಬಿಸಿ ಕೆಡಿಪ ವಿ-
ಕಾರ ಮಾಡದ ಹಾಗೆ ನೀ ಕರೆಸಿ
ಪುರಂದರ ವಿಠಲಗೆ ಬುದ್ದಿ ಹೇಳಮ್ಮ ॥ 3 ॥

**Note:** Below given lyrics are as per Ref. 1 above.

ರಾಗ: ಆನಂದ ಭೈರವಿ ತಾಳ: ಅಟ

ಗೋಕುಲದೊಳಗಿರಲಾರೆವಮ್ಮ, ಗೋಪಮ್ಮ ಕೇಳೆ
ಗೋಕುಲದೊಳಗಿರಲಾರೆವಮ್ಮ ॥ ಪ ॥

ಸಾಕು ಸಾಕು ನಮಗೇಕೆ ರಚ್ಚೆಗಳು
ಆ ಕೃಷ್ಣನ ಪರಿ ನೀ ಕೇಳಮ್ಮ ॥ ಅಪ ॥

ಹಾಲು ಮೊಸರು ಕದ್ದರೆ ಕಳಲಿ, ಗೋಪಮ್ಮ ಕೇಳೆ
ಮೇಲಿಟ್ಟ ಬೆಣ್ಣೆ ಮೆದ್ದರೆ ಮೆಲಲಿ, ಗೋಪಮ್ಮ ಕೇಳೀ -
ರೇಳು ಭುವನದೊಳಾಡುತಲಿರಲಿ
ಆಲದೆಲೆಯ ನಮ್ಮಾಲಯವನೆ ಪೊಕ್ಕು
ಬಾಲೆಯರೆಲ್ಲರ ಬತ್ತಲೆ ಮಾಡಿ
ಶಾಲೆಗಳೆಲ್ಲ ಮೇಲಕೆ ಹಾರಿಸಿ
ಆಲಿಂಗಿಸಿಕೊಂಡು ಬರುವನಮ್ಮ ॥ ೧ ॥

ತಾನಾಗಿ ಮನೆಗೆ ಬಂದರೆ ಬರಲಿ ಬಾಹೊ ವೇಳೆಯಲಿ
ಅಣುಗರ ಕೂಡಿಕೊಂಡು ಬರಲಿ ಕರೆತಂದರೆ ತರಲಿ
ಅನುಬಂಧನಾಗಿ ಇದ್ದರೆ ಇರಲಿ
ಅನುವು ಕಂಡುಕೊಂಡಾ ವೇಳೆಯಲಿ
ಉಣಬಿಟ್ಟಾಕಳ ಕರುಗಳನುಣಿಸಿ
ಮನೆಯವರೆಲ್ಲರನೆಬ್ಬಿಸಿ ತಾನೇ

ಮನೆಯೆಲ್ಲವ ಸೂರಾಡಿದನಮ್ಮ ॥ ೨ ॥

ಬಾರಿ ಬಾರಿಗೆ ಮುನಿದ ಕಳ್ಳ ಪತಿಯಂತೆ ತಾನು
ನೂರಾರು ಹೆಣ್ಣ ಕೂಡಿದನಲ್ಲ, ಗೋಪಮ್ಮ ಕೇಳೆ
ಯಾರ ಮುಂದೆ ಹೇಳಲಿ ಸೊಲ್ಲ
ಒರಗೆಯಲಿ ಸಂಸಾರ ಮಾಡುವ
ನಾರಿಯರೆಲ್ಲರ ರಂಬಿಸಿ ಕರೆದು ವಿ-
ಕಾರ ಮಾಡದಂತೆ ಪುರಂದರ ವಿಠ್ಠಲಗೆ
ಸಾರಿ ಸಾರಿ ನೀ ಬುದ್ದಿ ಹೇಳಮ್ಮ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೊಲ್ಲ ಸ್ತ್ರೀಯರು ಗುಂಪುಗೂಡಿ ಬಂದು ಯಶೋದೆಯ ಎದುರು ಶ್ರೀ ಕೃಷ್ಣನ ತುಂಟಾಟಗಳನ್ನು ವಿವರಿಸುತ್ತಾರೆ.

**ಆಲದೆಲೆಯ** = ಆಲದೆಲೆಯ ಮೇಲೆ ಮಲಗಿದವ

**ಅನುಬಂಧ** = ಸಂಬಂಧಿಕ.

**Classification:** Keerthane
**Ankita:** purandara vittala
**Location:** NA
**Category:** Krishna Leele,
**Sub-Category:** gokula, gopi, Krishna, halu, kalla, benne, Aladele, mitra, govu, mane, pati, hennu, buddi, yashode,
**Pravachana:** NA
**Explanation:** NA